1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ: 1397/2018

ಪಿರ್ಯಾದಿ : ಬಿಳಿಗೆರೆ ಪೋಲಿಸರು

ವಿರುದ್ಧ

ಆರೋಪಿತರು :
1. ಗುರುರಾಜ ಬಿನ್ ಲೇ.ಮಲ್ಲೇಗೌಡ , 38 ವರ್ಷ ,
2. ಮಹದೇವ ಬಿನ್ ಲೇ.ಮಲ್ಲೇಗೌಡ (ಪ್ರಕರಣವನ್ನು ಪ್ರತ್ಯೇಕಿಸಲಾಗಿದೆ)
3. ಕೆಂಚೇಗೌಡ ಬಿನ್ ಲೇ.ಮರೀಗೌಡ , 55 ವರ್ಷ
4. ಸುಂದರಮ್ಮ ಕೋಂ ಗುರುರಾಜ , 30 ವರ್ಷ

ಎಲ್ಲರ ವಾಸ ಗೀಕಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು

ದೋಷಾರೋಪಣೆ

ಶ್ರೀಮತಿ.ಸರಿತಾ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿಃ 31.01.2018 ರಂದು ರಾತ್ರಿ 09-00 ಗಂಟೆ ಸಮಯದಲ್ಲಿ ಬಿಳಿಗೆರೆ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದ ಗೀಕಳ್ಳಿ ಗ್ರಾಮದ ಚಾಸಾ-01ರವರ ವಾಸದ ಮನೆಯ ಬಳಿ ಆರೋಪಿತರಾದ ನೀವುಗಳು ಚಾಸಾ-01ರವರ ಜೊತೆ ಗಲಾಟೆ ಮಾಡುವ ಸಮಾನ ಉದ್ದೇಶದಿಂದ ಚಾಸಾ-01ರವರನ್ನು ಬಡ್ಡಿಮಗಳೆ, ಸೂಳೆಮಗಳೆ, ಬಚ್ಚಾಲಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.504 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆ ಪೈಕಿ 2, 3 ಮತ್ತು 4 ನೇ ಆರೋಪಿತರಾದ ನೀವು 1ನೇ ಆರೋಪಿಗೆ ಚಾಸಾ-1ರವರಿಗೆ ಸರಿಯಾಗಿ ಬುದ್ದಿ ಕಲಿಸು ಮುಂದೆ ಬಂದುದ್ದನ್ನು ನಾವು

ನೋಡ್ಕೋತ್ತೀವಿ ಎಂದು ಅಪರಾಧವನ್ನು ಎಸಗಲು ಕುಮ್ಮಕ್ಕು ನೀಡಿದ ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ.114 ಸಹವಾಚಕ ಕಲಂ.34 ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆ ಪೈಕಿ 1ನೇ ಆರೋಪಿತರಾದ ನೀವು ಚಾಸಾ-01ರವರ ಮನೆಗೆ ಅಕ್ರಮ ಪ್ರವೇಶ ಮಾಡಿದ ಕಾರಣ ಭಾರತ ದಂಡ ಸಂಹಿತೆ ಕಲಂ 448 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆ ಪೈಕಿ 1ನೇ ಆರೋಪಿತರಾದ ನೀವು ಮನೆಯಲ್ಲಿದ್ದ ಚಾಸಾ-01ರವರಿಗೆ ಕೈಯಿಂದ ಮೈಕೈಗೆ ಹೊಡೆದು ಸ್ವಯಂ ಪ್ರೇರಿತವಾಗಿ ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.323 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆ ಪೈಕಿ 1ನೇ ಆರೋಪಿಯಾದ ನೀವು ಚಾಸಾ-01ರವರಿಗೆ ದೊಣ್ಣೆಯಿಂದ ಬೆನ್ನು ಮೂಳೆ, ಬಲಗೈ ಮುಂದೋಳಿ ಮತ್ತು ಚಾಸಾ-2ರವರಿಗೆ ದೊಣ್ಣೆಯಿಂದ ಎದೆ, ಹಣೆಗೆ ಹಾಗೂ ಚಾಸಾ-03ರವರಿಗೂ ದೊಣ್ಣೆಯಿಂದ ಎಡಗೈ ತೋರುಬೆರಳಿಗೆ ಹೊಡೆದು ಚಾಸಾ-01,02 ಮತ್ತು 03ರವರಿಗೆ ಸ್ವಯಂ ಪ್ರೇರಿತವಾಗಿ ಸಾಮಾನ್ಯ

ಸ್ವರೂಪದ ಗಾಯಗಳನ್ನುಂಟುಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗೆ ಆರೋಪಿತರಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕಃ 03.12.2025 | 1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಸ್ಥಳ ಃ ನಂಜನಗೂಡು | ನಂಜನಗೂಡು

1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆಃ 1397/2018

ಪಿರ್ಯಾದಿ ಃ ಬಿಳಿಗೆರೆ ಪೋಲಿಸರು

ವಿರುದ್ಧ

ಆರೋಪಿತರು ಃ
1. ಗುರುರಾಜ ಬಿನ್ ಲೇ.ಮಲ್ಲೇಗೌಡ , 38 ವರ್ಷ ,
2. ಮಹದೇವ ಬಿನ್ ಲೇ.ಮಲ್ಲೇಗೌಡ (ಪ್ರಕರಣವನ್ನು ಪ್ರತ್ಯೇಕಿಸಲಾಗಿದೆ)
3. ಕೆಂಚೇಗೌಡ ಬಿನ್ ಲೇ.ಮರೀಗೌಡ , 55 ವರ್ಷ
4. ಸುಂದರಮ್ಮ ಕೋಂ ಗುರುರಾಜ , 30 ವರ್ಷ

ಎಲ್ಲರ ವಾಸ ಗೀಕಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು

ಃ ಆಪಾದನೆ ಃ

ಪ್ರಶ್ನೆಃ1– ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

1 ನೇ ಆರೋಪಿ ಉತ್ತರಃ

3 ನೇ ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

ಪ್ರಶ್ನೆಃ2– ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿ ಉತ್ತರಃ

3 ನೇ ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
**ನಂಜನಗೂಡು**